ಅಂದಾಜು 8.00 ಎಕರೆ ಜಮೀನಿನ ಬೆಳೆ(ಭತ್ತ) ಕಟಾವು ಮಾಡಿಕೊಂಡು ಹೋಗಿದ್ದು, ಇದರ ಮೌಲ್ಯ ಸುಮಾರು ರೂ.1,10,000/–ಗಳಷ್ಟಾಗುವುದು. ತಾಲ್ಲೂಕು ದಂಡಾಧಿಕಾರಿಗಳ ಆದೇಶ ಉಲ್ಲಂಘನೆ ಮಾಡಿದ ಶ್ರೀ ಕೆ.ಟಿ ರಾಮಪ್ಪಗೌಡ ಮತ್ತಿತರರ ವಿರುದ್ಧ ಮೊ.ಸಂಖ್ಯೆ:514/09ರನ್ವಯ ಪ್ರಕರಣ ದಾಖಲ್ಮಾಡಿ, ಆರೋಪಿತರನ್ನು ದಸ್ತಗಿರಿ ಮಾಡಿ ನ್ಯಾಯಾಂಗ ಬಂಧನಕ್ಕೆ ಒಳಪಡಿಸಿ, ಕೃತ್ಯಕ್ಕೆ ಬಳಸಿದ ವಾಹನ ಜಪ್ತಿ ಮಾಡಲಾಗಿದೆ. ವಿವಾಧಿತ ಸ್ಥಳದಲ್ಲಿ ಇನ್ನುಳಿದ 2–00ಎಕರೆ ಜಮೀನಿನಲ್ಲಿನ ಫಸಲನ್ನು ದಿನಾಂಕ:29.12.2009ರಂದು ರೂ.21,000/–ಗಳಿಗೆ ಹರಾಜು ಮಾಡಲಾಗಿದೆ.

ಆ) ಪ.ಜಾ/ಪಂಗಡ ದೌರ್ಜನ್ಯ ಕಾಯಿದೆ ಅಡಿಯಲ್ಲಿ ನೊಂದ ಸಂತ್ರಸ್ತರಿಗೆ ಪರಿಹಾರ ಪಾವತಿಸಲು ಅವಕಾಶವಿದ್ದು, ಪ್ರಸ್ತುತ ಈ ಕಾಯಿದೆ ಅಡಿಯಲ್ಲಿ ಯಾರೂ ದೂರು ನೀಡಿಲ್ಲದಿರುವ ಕಾರಣ ಪ್ರಕರಣ ದಾಖಲಾಗಿರುವುದಿಲ್ಲ.

ಛತ್ರಗಳ ನಿರ್ವಹಣೆ ಮತ್ತು ಹೆರಿಟೇಜ್ ಟೂರ್ ಯಾತ್ರಿಗಳಿಗೆ ಸೌಲಭ್ಯ

808(482) ಶ್ರೀ ಕುಮಾರಸ್ವಾಮಿಕೆ ಜಿ: ಮಾನ್ಯ ಗೃಹ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದ ಹೊರಗೆ ಯಾತ್ರಿಕರಿಗೆ/ಪ್ರವಾಸಿಗಳಿಗೆ ಮುಜರಾಯಿ ಇಲಾಖೆ ಅಧೀನದಲ್ಲಿರುವ ಛತ್ರಗಳೆಷ್ಟು ಹಾಗೂ ಈ ಛತ್ರಗಳಲ್ಲಿ ಲಭ್ಯವಾಗುವ ಊಟ/ವಸತಿ ಸೌಲಭ್ಯ ಹಾಗೂ ಯಾತ್ರಿಗಳಿಂದ ಪಡೆಯುವ ದರಗಳೆಷ್ಟು (ಪ್ರತಿ ಛತ್ರವಾರು ವಿವರ ನೀಡುವುದು);

ಆ) ಕರ್ನಾಟಕ ಹೆರಿಟೇಜ್ ಟೂರ್ ಯಾತ್ರಿಗಳಿಗೆ ಸರ್ಕಾರದಿಂದ ಸಹಾಯ ಧನ ಮತ್ತು ಈ ಛತ್ರಗಳಲ್ಲಿ ಉಚಿತ ಊಟ ಸೌಲಭ್ಯ ಒದಗಿಸುತ್ತಿದೆಯೇ; (ಕಳೆದ 3 ವರ್ಷಗಳಿಂದ ಭರಿಸಲಾದ ವೆಚ್ಚವೆಷ್ಟು; ವಿವರ ನೀಡುವುದು);

ಇ) ಕಳೆದ 3 ವರ್ಷಗಳಿಂದ ಈ ಛತ್ರಗಳಿಗೆ ಸರ್ಕಾರದಿಂದ ಸಹಾಯ ಧನ ಮತ್ತು ಈ ಛತ್ರಗಳಲ್ಲಿ ಉಚಿತ ಊಟ ಸೌಲಭ್ಯ ಒದಗಿಸಲಾಗುತ್ತಿದೆಯೇ; (ಕಳೆದ 3 ವರ್ಷಗಳಿಂದ ಭರಿಸಲಾದ ವೆಚ್ಚವೆಷ್ಟು ವಿವರ ನೀಡುವುದು);

ಈ) ಕಳೆದ 3 ವರ್ಷಗಳಿಂದ ಈ ಛತ್ರಗಳಿಂದ ಬಂದ ಆದಾಯವೆಷ್ಟು?

(ಛತ್ರವಾರು ವಿವರ ನೀಡುವುದು)

ಉ) ನಷ್ಟದಲ್ಲಿರುವ ಛತ್ರಗಳ ನಿರ್ವಹಣೆ ಮಾಡಲು ಸ್ಥಾನಿಕ ಕನ್ನಡಿಗರಿಗೆ ನೀಡಲಾಗುವುದೇ (ವಿವರ ನೀಡುವುದು)?

ಶ್ರೀ ಆರ್ ಅಶೋಕ್(ಗೃಹ ಮತ್ತು ಮುಜರಾಯಿ ಸಚಿವರು)

ಅ) ಮುಜರಾಯಿ ಇಲಾಖೆಯ ಅಧಿನದಲ್ಲಿರುವ ಹೊರ ರಾಜ್ಯಗಳಲ್ಲಿ ಇರುವ ಛತ್ರಗಳ ವಿವರ ಈ ಕೆಳಕಂಡಂತಿರುತ್ತದೆ.

1. ಕರ್ನಾಟಕ ರಾಜ್ಯ ಛತ್ರ, ತಿರುಮಲ, ಆಂಧ್ರಪ್ರದೇಶ
2. ಕರ್ನಾಟಕ ರಾಜ್ಯ ಛತ್ರ, ಶ್ರೀಶೈಲಂ, ಆಂಧ್ರಪ್ರದೇಶ
3. ಕರ್ನಾಟಕ ರಾಜ್ಯ ಛತ್ರ., ಮಂತ್ರಾಲಯ, ಆಂಧ್ರಪ್ರದೇಶ
4. ಕರ್ನಾಟಕ ರಾಜ್ಯ ಛತ್ರ, ವಾಣಾಸಿ, ಉತ್ತರಪ್ರದೇಶ

ಮೇಲ್ಕಂಡ ಯಾವುದೇ ಛತ್ರಗಳಲ್ಲಿ ಊಟದ ಸೌಲಭ್ಯವಿರುವುದಿಲ್ಲ. ಈ ಛತ್ರಗಳಲ್ಲಿ ವಸತಿ ಸೌಲಭ್ಯದ ಬಗ್ಗೆ ಯಾತ್ರಿಕರಿಂದ ಪಡೆಯುವ ದರದ ವಿವರವನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.

ಆ) ಇಲ್ಲ.

ಇ) ಕರ್ನಾಟಕ ರಾಜ್ಯ ಛತ್ರ ತಿರುಮಲದಲ್ಲಿ ಕೊಠಡಿಗಳ ನಿರ್ಮಾಣಕ್ಕೆ 2007–08ನೇ ಸಾಲಿನಲ್ಲಿ ರೂ.500.00 ಲಕ್ಷಗಳು ಹಾಗೂ 2009–10ನೇ ಸಾಲಿನಲ್ಲಿ ರೂ.100.00 ಲಕ್ಷ ಅನುದಾನ ಸರ್ಕಾರ ಬಿಡುಗಡೆ ಮಾಡಿರುತ್ತದೆ. ಸಹಾಯಾನುದಾನ ಬಿಡುಗಡೆ ಮಾಡಿರುವುದಿಲ್ಲ.

ಸದರಿ ಛತ್ರಗಳಲ್ಲಿ ಉಚಿತ ಊಟದ ಸೌಲಭ್ಯವನ್ನು ಒದಗಿಸುತ್ತಿರುವುದಿಲ್ಲ.

ಈ) ವಿವರ ಅನುಬಂಧ–2 ರಲ್ಲಿ ಲಗತ್ತಿಸಿದೆ.

ಉ) ಕರ್ನಾಟಕ ರಾಜ್ಯ ಛತ್ರ ವಾರಣಾಸಿಯ ನಿರ್ವಹಣೆಗಾಗಿ ಕರ್ನಾಟಕ ಕಾಶಿ ಸಂಘದವರು ಅರ್ಜಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಪರಿಶೀಲನೆಯಲ್ಲಿದೆ.

ಅನುಬಂಧ–1

ಹೊರ ರಾಜ್ಯ ಛತ್ರಗಳಲ್ಲಿ ವಸತಿ ಸೌಲಭ್ಯಗಳು ಹಾಗೂ ಯಾತ್ರಿಕರಿಂದ ಪಡೆಯುವ ದರದ ವಿವರಗಳು:

1. ಕರ್ನಾಟಕ ರಾಜ್ಯ ಛತ್ರ ತಿರುಮಲ, ಆಂಧ್ರಪ್ರದೇಶ :

ಕರ್ನಾಟಕ ಪ್ರವಾಸಿ ಸೌಧ	ದಿನವೊಂದರ ದರ (1 ಕೊಠಡಿಗೆ) ರೂ.	ಕೊಠಡಿಗಳ ಸಂಖ್ಯೆ	ಕರ್ನಾಟಕ ಕಲ್ಯಾಣ ಮಂಟಪ	ದಿನವೊಂದರ ದರ ರೂ.	ಕೊಠಡಿಗಳ ಸಂಖ್ಯೆ
ಡೀಲಕ್ಸ್ ಕೊಠಡಿಗಳು	500–00	72	ಸಾಮಾನ್ಯ ಕೊಠಡಿಗಳು	150–00	08
ಹವಾನಿಯಂತ್ರಿಕ ಕೊಠಡಿಗಳು	1000–00	10	ಕಲ್ಯಾಣ ಮಂಟಪ	5400–00	01
ಗಣ್ಯವ್ಯಕ್ತಿಗಳ ಹವಾನಿಯಂತ್ರಿತ ಕೊಠಡಿಗಳು	1500–00	4	–	–	–

2. ಕರ್ನಾಟಕ ರಾಜ್ಯ ಛತ್ರ ಶ್ರೀಶೈಲಂ, ಆಂಧ್ರಪ್ರದೇಶ

ಕೊಠಡಿಗಳ ವರ್ಗ	ದಿನವೊಂದಕ್ಕೆ (1 ಕೊಠಡಿಗೆ) ದರ ರೂ.	ಕೊಠಡಿಗಳ ಸಂಖ್ಯೆ	ಷರಾ
ಸಾಮಾನ್ಯ ಕೊಠಡಿಗಳು	150–00	16	–
ಹವಾನಿಯಂತ್ರಿತ ಕೊಠಡಿಗಳು	600–00	08	ಹವಾನಿಯಂತ್ರಣ ಹೊರತುಪಡಿಸಿದಲ್ಲಿ

			ಕೊಠಡಿ ಒಂದಕ್ಕೆ ರೂ. 400–00
ಡಾರ್ಮೆಂಟರಿ ಹಾಲ್	600–00	01	–

3. ಕರ್ನಾಟಕ ರಾಜ್ಯ ಛತ್ರ, ಮಂತ್ರಾಲಯ, ಆಂಧ್ರಪ್ರದೇಶ:

ಕೊಠಡಿಗಳ ವರ್ಗ	ದಿನವೊಂದಕ್ಕೆ (1 ಕೊಠಡಿಗೆ) ದರ ರೂ.	ಕೊಠಡಿಗಳ ಸಂಖ್ಯೆ	ಷರಾ
ಸಾಮಾನ್ಯ ಕೊಠಡಿಗಳು	15–00	24	–
ಹವಾನಿಯಂತ್ರಿತ ಕೊಠಡಿಗಳು	500–00	09	ಮಾರ್ಚ್‌ನಿಂದ ಜೂನ್ ರವರೆಗೆ ಕೊಠಡಿ ಒಂದಕ್ಕೆ ರೂ. 700–00

4. ಕರ್ನಾಟಕ ರಾಜ್ಯ ಛತ್ರ ವಾರಣಾಸಿ, ಉತ್ತರಪ್ರದೇಶ:

ಕೊಠಡಿಗಳ ವರ್ಗ	ದಿನವೊಂದಕ್ಕೆ (1 ಕೊಠಡಿಗೆ) ದರ ರೂ	ಕೊಠಡಿಗಳ ಸಂಖ್ಯೆ
ಡಾರ್ಮೆಂಟರಿ ಹಾಲ್	500–00	01
6 ಹಾಸಿಗೆಗಳ ಕೊಠಡಿಗಳು	350–00	01
4 ಹಾಸಿಗೆಗಳ ಕೊಠಡಿಗಳು	250–00	05
4 ಹಾಸಿಗೆಗಳ	200–00	02

ಕೊಠಾಡಿಗಳು		
2 ಹಾಸಿಗೆಗಳ ಕೊಠಡಿಗಳು	150–00	03
1 ಹಾಸಿಗೆಯ ಕೊಠಡಿಗಳು	60–00	06

ಅನುಬಂಧ–2

ಹೊರ ರಾಜ್ಯ ಛತ್ರಗಳಿಂದ ಕಳೆದ 3 ವರ್ಷಗಳಲ್ಲಿ ಬಂದ ಆದಾಯದ ವಿವರ:

ಕ್ರ ಸಂ	ಛತ್ರಗಳ ವಿವರ	2007–08 (ರೂ. ಲಕ್ಷ)	2008–09 (ರೂ ಲಕ್ಷ)	2009–10 (ರೂ. ಲಕ್ಷ)
1	ಕರ್ನಾಟಕ ರಾಜ್ಯ ಛತ್ರ, ತಿರುಮಲ, ಆಂಧ್ರಪ್ರದೇಶ	166.50	224.30	206.99
2	ಕರ್ನಾಟಕ ರಾಜ್ಯ ಛತ್ರ, ಶ್ರೀ ಶೈಲಂ, ಆಂಧ್ರಪ್ರದೇಶ	5.64	6.75	8.40
3	ಕರ್ನಾಟಕ ರಾಜ್ಯ ಛತ್ರ ಮಂತ್ರಾಲಯ, ಆಂಧ್ರಪ್ರದೇಶ	19.29	23.63	15.07
4	ಕರ್ನಾಟಕ ರಾಜ್ಯ ಛತ್ರ, ವಾರಾಣಾಸಿ, ಉತ್ತರಪ್ರದೇಶ	3.62	4.19	4.02